ತೆಗೆದೇ ಇದ್ದುದರಿಂದ ಇದರ ಪರಿಣಾಮ ಡ್ರೈವರ್‌ಗೆ ಅಷ್ಟಾಗಿ ಬೀರಿಲ್ಲ ಎಂದು ಸಮಾಧಾನಗೊಂಡರು. ಬಂದಷ್ಟೆ ವೇಗವಾಗಿ ಆ ವಾಸನೆ ಇಲ್ಲವಾಯಿತು. ಇನ್ನೊಂದಷ್ಟು ದೂರ ಕಾರು ಚಲಿಸಿದಾಗ ಮತ್ತೊಮ್ಮೆ ಘಮಲು ಕಾರನ್ನು ಆವರಿಸಿಕೊಂಡಿತು. ಈಗ ಸಾಹೇಬ್ರು ಹಿಂಬದಿ ಸೀಟನಲ್ಲಿ ಕೂತಿರುವ ಕಿರಿಯ ಅಧಿಕಾರಿಗಳ ಕಡೆಗೆ ಗಮನಹರಿಸಿದರು. ಕಿಟಕಿ ಗಾಜನ್ನು ಹಾಕಿಯೇ ಇರುವ ಅವರನ್ನು ನೋಡಿ ಕನಿಕರಿಸಿದರು. ಅಲ್ಲಿಂದ 2–3 ನಿಮಿಷದ ಪ್ರಯಾಣಕ್ಕೆ ಮತ್ತದೆ ಘಮಲು ಈ ಹಿಂದಿಗಿಂತ ಗಂಭೀರವಾಗಿತ್ತು. ಈಗ ಹಿಂಬದಿಯ ಕಿರಿಯ ಅಧಿಕಾರಿಗಳೂ ಕಿಟಕಿ ಗಾಜು ಇಳಿಸಿದ್ದರು.

ಸಾಹೇಬ್ರು ಕೆಳಹಂತದವರನ್ನು ಕುರಿತು 'ತಿಪ್ಪಾಪುರಕ್ಕಿಂತ ಮುಂಚೆ ಈ ದಾರಿಲಿ ಬೇರೆ ಯಾವ ಸ್ಕೂಲು ಸಿಗುತ್ತೆ' ಕೇಳಿದರು. ಕೆಳ ಹಂತದವರು, 'ಇದೇ ಟರ್ನಿಂಗ್‌ನಲ್ಲಿ ಒಂದು ಎಲ್‌ಪಿಎಸ್ ಐತೆ ಸರ್' ಎಂದರು. ಸಾಹೇಬ್ರು, 'ಹಂಗಿದ್ರು ಬಂದಿದಿವಿ ಅದ್ನು ನೋಡಿದಂಗೆ ಆಗುತ್ತೆ ತಿರುಗುಸ್ರಿ' ಎಂದ್ರು ಡ್ರೈವರ್‌ಗೆ. ಅಷ್ಟೊತ್ತಿಗಾಗಲೆ ಸಾಹೇಬ್ರ ಗುದದ ಒತ್ತಡ ಮಿತಿ ಮೀರಿದಂತಿತ್ತು. ಒಂದೆರಡು ನಿಮಿಷಕ್ಕೇ ಮತ್ತೊಂದು ಶಾಲೆ ಸಿಕ್ಕಿತು. ಕಾರ್ ಇಳಿದವರೇ ಸಾಹೇಬ್ರು ಅಲ್ಲಿರುವ ಶೌಚಾಲಯದ ಕಡೆಗೆ ದಾಟು ಹೆಜ್ಜೆ ಹಾಕತೊಡಗಿದರು. ಗಂಡು ಮಕ್ಕಳ ಶೌಚಾಲಯ ಎಂದು ಬೋರ್ಡ್ ಇತ್ತು ಬಿಟ್ಟರೆ ಅದರ ಬಾಗಿಲು ತೆರೆದಿರಲಿಲ್ಲ. ಅದರ ಮುಂದೆಲ್ಲ ಬೇಲಿ ಬೆಳೆದಂತಿರುವುದನ್ನ ಕಂಡ ಸಾಹೇಬ್ರು ಅದಿರುವ ಸ್ಥಿತಿಯನ್ನು ಅಂದಾಜಿಸಿ ಇಮಿಡಿಯಟ್ಟಾಗಿ ಈ ಸ್ಕೂಲ್ ಮೇಷ್ಟ್ರಿಗೆ ಸಸ್ಪೆಂಷನ್ ಆರ್ಡರ್ ರೆಡಿ ಮಾಡ್ರಿ ಎಂದು ಹೇಳಿ ಯಾರ ಸಮಜಾಯಿಶಿಯನ್ನೂ ಕೇಳದೆ ಕಾರ್ ಹತ್ತಿಯೇ ಬಿಟ್ಟರು.

ಕಾರು ತಿಪ್ಪಾಪುರದ ಕಡೆಗೆ ಓಡಿತು. ತಿಪ್ಪಾಪುರ ತಲುಪುವಷ್ಟರಲ್ಲಿ ಸಾಹೇಬ್ರು ಸಾಕಷ್ಟು ಬೆವತಿದ್ದರು. ಹಿಂಬದಿಯ ಅಧಿಕಾರಿಗಳು ಆಡಳಿತಾತ್ಮಕವಾಗಿ ಏನೇನೊ ಮಾತಾಡುತ್ತಿದ್ದರಾದರೂ ಅದ್ಯಾವುದೂ ಇವರ ಕಿವಿಯೊಳಗೆ ಹೋಗದಷ್ಟು ಬ್ಲಾಂಕ್ ಆಗಿದ್ದರು. ಆಕಡೆ ಕುಂಡಿಯ ಮೇಲೊಮ್ಮೆ ಬಾರ ಬಿಟ್ಟು ಕೂತರೆ ಇನ್ನೊಮ್ಮೆ ಆ ಬಾರವನ್ನು ಇನ್ನೊಂದರ ಕಡೆಗೆ ಬದಲಾಯಿಸುತ್ತ ಹೊಸಕಾಡುತ್ತಿದ್ದರು. ಈಗ ಕಾರ್‌ನ ಎಲ್ಲ ಗ್ಲಾಸ್‌ಗಳು ತೆರೆದುಕೊಂಡಿದ್ದವು.

ಆಗಷ್ಟೆ ಶೌಚಾಲಯ ತೊಳೆದು ನೀಟ್ ಮಾಡಿ ಬಂದಿದ್ದ ತಿಮ್ಮಪ್ಪ ಮೇಷ್ಟ್ರು ಬಟ್ಟೆ ಹಾಕಿಕೊಂಡು ನಿಂತಿದ್ದರು. ಸಾಹೇಬ್ರ ಕಾರು ನೋಡಿದ್ದೆ ತಡ ಗಡ ಗಡ ನಡುಗತೊಡಗಿದರು. ಸಾಹೇಬ್ರು ಇಳಿದವರೇ ಶೌಚಾಲಯದ ಕಡೆಗೆ ಓಡತೊಡಗಿದರು. ಪೊರಕೆ ಖ್ಯಾತಿಯ ಸಾಹೇಬ್ರು ಓಡ್ತಿರೋದ ನೋಡಿದ ತಿಮ್ಮಪ್ಪ ಮೇಷ್ಟ್ರು 'ಹೊ ನನಗೆ ಇವತ್ತು ಗ್ಯಾರಂಟಿ ಕಾದೈತೆ' ಅಂದುಕೊಂಡರು. ಬಾಗಿಲು ತೆರೆದಿರುವ ಶೌಚಾಲಯ ನೋಡಿದ ಸಾಹೇಬ್ರಿಗೆ ಹೋದ ಜೀವ ಬಂದಂತಾಯಿತು. ಒಳ ಹೊಕ್ಕವರೇ ಬಾಗಿಲು ದೂಡಿ ಅದ್ಯಾವಾಗ ಪ್ಯಾಂಟ್ ಕಳಚಿದರೋ ಅರ್ಧ ಕುಸಿದು ಬಿಟ್ಟರು. ಕೂತೆ ನಲ್ಲಿ ಆನ್ ಮಾಡಿದರು. ನೀರು ಸರಾಗವಾಗಿ ಹರಿಯುತ್ತಿತ್ತು. ಸಾವಧಾನವಾಗಿ ಪೆನಾಯಿಲ್, ಡೆಟಾಲ್ ಎಲ್ಲದ್ದರ ಸ್ಮೆಲ್ಲು ಮೂಗಿಗೆ ಬಡಿಯತೊಡಗಿತು. ಹೊಟ್ಟೆ ಖಾಲಿ ಆದದ್ದಕ್ಕೂ ಅದಕ್ಕೂ ಸಾಹೇಬ್ರಿಗೆ ಸ್ವರ್ಗವೇ ಸಿಕ್ಕಂತಾಯಿತು. ತುಂಬ ಹೊತ್ತು ಅಲ್ಲೆ ವಿರಮಿಸಿ, ಎಲ್ಲವನ್ನೂ ಮುಗಿಸಿ, ಬೆವೆತಿದ್ದ ಮುಖವನ್ನೊಮ್ಮೆ ತೊಳೆದು ಕೊಂಡು, ಕರ್ಚಿಪ್‌ನಲ್ಲಿ ಮುಖ ಒತ್ತಿಕೊಂಡು, ನೇತಾಡುತ್ತಿದ್ದ ಕನ್ನಡಿಯಲ್ಲಿ ಮುಖ ನೋಡಿಕೊಂಡು ತಲೆ ಬಾಚಿಕೊಂಡರು.

ಶೌಚಾಲಯದಿಂದ ಆಚೆ ಬರುವಾಗ ಸಾಹೇಬ್ರ ಮುಖದಲ್ಲಿ ಹೊಸ ಖಳೆ ಇದ್ದಂತಿತ್ತು. ನಿಧಾನವಾಗಿ ನಡೆದು ಆಫೀಸ್ ರೂಮ್ ಕಡೆ ಬರುತ್ತಿದ್ದರೆ ತಿಮ್ಮಪ್ಪ ಮೇಷ್ಟ್ರು ಬೆವತು ನೀರಾಗಿದ್ದರು. ಕೈ ನಡುಗಿಸುತ್ತ ಬಾರದ ಕೈಗಳನ್ನು ಎತ್ತಿ ನಮುಸ್ಕಾರ ಮಾಡಲು ಮುಂದಾಗಿ ಏನೊ ಹೇಳಲು ಇನ್ನೂ ಶುರು ಮಾಡಿರಲಿಲ್ಲ. 'ರಿ ಮೇಷ್ಟ್ರೆ ಏನೂ ಹೇಳ್ಬೇಡ್ರಿ, ಇಂಥ ಸಾವ್ರ ಆರೋಪಗಳು ಬತ್ತಿರ್ತವೆ, ಅದುಕ್ಕೆಲ್ಲ ಹೆದ್ರಿಕಂಡ್ರೆ ಕೆಲ್ಸ ಮಾಡಕಾಗುತ್ತೇನ್ರಿ. ಎಲ್ಲ ನೀಟಗೆ ಮೇಂಟೇನ್ ಮಾಡಿದಿರ, ಗುಡ್' ಎಂದರು.

ಬಂದಿದ್ದ ಅಧಿಕಾರಿಗಳೆಲ್ಲ ತಬ್ಬಿಬ್ಬಾಗಿ ಮುಖ ಮುಖ ನೋಡಿಕೊಂಡರು. ತಿಮ್ಮಪ್ಪ ಮೇಷ್ಟ್ರಿಗೆ ಇದು ಕನಸೊ ನನಸೊ ತಿಳಿಯದಾಗಿ, 'ಬನ್ನಿ ಸಾ ಒಳಿಕೆ ಬಾಳೆ ಹಣ್ಣು ತರುಸ್ತೀನಿ' ಅಂದ್ರು. 'ಇಲ್ಲ ಅದುಕ್ಕೆಲ್ಲ ಟೈಮಿಲ್ಲ, ಸರಿ. ಹೋಗಿ ಏನು ಹೆದರ ಬೇಡಿ ನಾನಿದಿನಿ' ಎಂದು ಕಾರ್ ಹತ್ತಿಯೇ ಬಿಟ್ಟರು. ತಿಮ್ಮಪ್ಪನವರು ಏನೂ ಅರ್ಥವಾಗದೆ ಅವಕ್ಕಾಗಿ ನಿಂತರು.

●